"ಗರ್ಭಕಂಠದ ಕ್ಯಾನ್ಸರ್‌ನ ಹೊರೆಯನ್ನು ಹೆಚ್.ಪಿ. ವಿ ಲಸಿಕೆಯಿಂದ ಹಾಗೂ ಪ್ರಿಕ್ಯಾನ್ಸರ್‌ನ ಪತ್ತೆ ಮತ್ತು ಚಿಕಿತ್ಸೆಯಿಂದ ನಿರ್ಮೂಲನೆ ಮಾಡಬಹುದು

– ವಿಶ್ವ ಆರೋಗ್ಯ ಸಂಸ್ಥೆ

MANIPAL ACADEMY of HIGHER EDUCATION

GOVERNMENT OF KARNATAKA

Department of Biotechnology, Government of India

Funded by the European Union

## ಗರ್ಭಕಂಠದ ಕ್ಯಾನ್ಸರ್‌ನ ಬಗ್ಗೆ




ಗರ್ಭಕಂಠದ ಕ್ಯಾನ್ಸರ್ ಮಹಿಳೆಯ ಗರ್ಭಕೋಶಯದ ಬಾಯಿಯಲ್ಲಿ (ಗರ್ಭಾಶಯದ ಕೆಳಗಿನ ಭಾಗ) ಬೆಳೆಯುತ್ತದೆ.

ಪ್ರಿಕ್ಯಾನ್ಸರ್ ಆಗಿ ಪ್ರಾರಂಭವಾಗುತ್ತದೆ ಮತ್ತು ಕ್ಯಾನ್ಸರ್ ಆಗಿ ಮುಂದುವರಿಯುತ್ತದೆ.

**ಹ್ಯೂಮನ್ ಪ್ಯಾಪಿಲೋಮ 16 ಮತ್ತು 18 ವೈರಲ್ ಸೋಂಕುಗಳು ಇದಕ್ಕೆ ಮುಖ್ಯ ಕಾರಣವಾಗಿದೆ.**

ಅಪಾಯವನ್ನು ಉಂಟುಮಾಡುವ ಕೆಲವು ಅಂಶಗಳು

» ಅಸುರಕ್ಷಿತ ಲೈಂಗಿಕ ಸಂಪರ್ಕ
» ದುರ್ಬಲಗೊಂಡ ರೋಗನಿರೋಧಕ ವ್ಯವಸ್ಥೆ
» ಇತರ ಜನನಾಂಗದ ಸೋಂಕುಗಳು

## ಪ್ರಸ್ತುತ ವಿಧಾನಗಳು

ಭಾರತದಲ್ಲಿ ಪ್ರಸ್ತುತವಾಗಿ ಗರ್ಭಕಂಠದ ಕ್ಯಾನ್ಸರ್ ಅನ್ನು ಪರೀಕ್ಷಿಸಲು ಬಳಸುವ ವಿಧಾನಗಳು

- **ಪ್ಯಾಪ್ ಸ್ಮಿಯರ್ ಪರೀಕ್ಷೆ**
  » ವ್ಯವಸ್ಥಿತ ಪ್ರಯೋಗಾಲಯ ಮತ್ತು ತರಬೇತಿ ಪಡೆದ ವೈದ್ಯಕೀಯ ಸಿಬ್ಬಂದಿಯ ಅಗತ್ಯವಿದೆ
  » ವ್ಯಾಪಕವಾಗಿ ಲಭ್ಯವಿಲ್ಲ
- **ಅಸಿಟಿಕ್ ಆಮ್ಲ ಉಪಯೋಗಿಸಿ ದೃಶ್ಯದ ಮೂಲಕ ತಪಾಸಣೆ**
  » ತರಬೇತಿ ಪಡೆದ ಆರೋಗ್ಯ ವೃತ್ತಿಪರರಿಂದ ಸ್ತ್ರೀರೋಗ ಪರೀಕ್ಷೆ

### ಡಬ್ಲ್ಯೂಎಚ್‌ಒ ನ ಶಿಫಾರಸು

- **ಹೆಚ್.ಪಿ.ವಿ ಪರೀಕ್ಷೆ:**
  » ಹೆಚ್.ಪಿ.ವಿ ಪರೀಕ್ಷೆಯು ಗರ್ಭಕಂಠದ ಕ್ಯಾನ್ಸರ್ ಅನ್ನು ಪರೀಕ್ಷಿಸಲು ಶಿಫಾರಸು ಮಾಡಲಾದ ಪರೀಕ್ಷೆ ಆಗಿದ್ದು, ಇದು 95% ರಷ್ಟು ಕ್ಯಾನ್ಸರ್ ಅನ್ನು ಪತ್ತೆ ಮಾಡುವ ಪ್ರಮಾಣವನ್ನು ಹೊಂದಿದೆ
  » ಈ ಪರೀಕ್ಷೆಯನ್ನು ಪ್ರತಿ 5 ವರ್ಷಗಳಿಗೊಮ್ಮೆ ಶಿಫಾರಸು ಮಾಡಲಾಗಿದೆ

**ಕನಿಷ್ಠ ಒಂದು ಅಥವಾ ಎರಡು ಸ್ಕ್ರೀನಿಂಗ್ ಪರೀಕ್ಷೆಗಳನ್ನು ತಮ್ಮ 35 ಮತ್ತು 45 ವಯಸ್ಸಿನ ನಡುವೆ ಮಾಡಿಸಿಕೊಳ್ಳುವುದರಿಂದ ಹೆಚ್ಚಿನ ಸಂಖ್ಯೆಯ ಮಹಿಳೆಯರನ್ನು ಗರ್ಭಕಂಠದ ಕ್ಯಾನ್ಸರ್‌ನಿಂದ ರಕ್ಷಿಸಬಹುದು**

# PRESCRIP TEC

## ಗರ್ಭಕಂಠದ ಕ್ಯಾನ್ಸರ್‌ನ ನಿರ್ಮೂಲನೆಯ ಕಡೆಗೆ ಹೊಸ ಶೋಧಗಳನ್ನೊಳಗೊಂಡ ಪರಿಶೀಲನೆ ಮತ್ತು ತಡೆಗಟ್ಟುವಿಕೆಯ ಅಧ್ಯಯನ

PRESCRIP-TEC ಇದು ಜಾಗತಿಕ ಯೋಜನೆಯಾಗಿದ್ದು, ಗರ್ಭಕಂಠದ ಕ್ಯಾನ್ಸರ್ ಅನ್ನು ನಿರ್ಮೂಲನೆ ಮಾಡುವ ವಿಶ್ವ ಆರೋಗ್ಯ ಸಂಸ್ಥೆ(ಡಬ್ಲ್ಯೂ.ಎಚ್.ಒ)ಯ ಕರೆಗೆ ಪ್ರತಿಕ್ರಿಯೆಯಾಗಿ ವಿನ್ಯಾಸಗೊಳಿಸಲಾಗಿದೆ.

**ಡಬ್ಲ್ಯೂಎಚ್‌ಒ ಜಾಗತಿಕವಾಗಿ ಗರ್ಭಕಂಠದ ಕ್ಯಾನ್ಸರ್ ಅನ್ನು 2030 ರ ವೇಳೆಗೆ ನಿರ್ಮೂಲನೆ ಮಾಡುವ ಕಾರ್ಯತಂತ್ರವನ್ನು ಪ್ರಾರಂಭಿಸಲು ಎಲ್ಲಾ ರಾಷ್ಟ್ರಗಳನ್ನು ಒಟ್ಟಾಗಿ ಎಂದು ಕೇಳಿಕೊಂಡಿದೆ.**




## ಅಂಕಿಅಂಶಗಳು




ಭಾರತದಲ್ಲಿ ಮಹಿಳೆಯರಲ್ಲಿ ಕಂಡುಬರುವ ಕ್ಯಾನ್ಸರ್‌ಗಳಲ್ಲಿ ಗರ್ಭಕಂಠದ ಕ್ಯಾನ್ಸರ್ ಎರಡನೇ ಅತಿ ಹೆಚ್ಚಾಗಿ ಕಾಣಬರುವ ಕ್ಯಾನ್ಸರ್‌ನ ಪ್ರಕಾರವಾಗಿದೆ.

ಭಾರತವು ಸುಮಾರು 4.07 ಲಕ್ಷ ಅಥವಾ ಅದಕ್ಕಿಂತ ಹೆಚ್ಚು ಮಹಿಳೆಯರು ಗರ್ಭ ಕಂಠದ ಕ್ಯಾನ್ಸರ್‌ನಿಂದ ಬಳಲುತ್ತಿದ್ದಾರೆ

ಕರ್ನಾಟಕದಲ್ಲಿ ಶೇಕಡಾ 12% ರಷ್ಟು ಕ್ಯಾನ್ಸರ್ ಪ್ರಕರಣಗಳು ಗರ್ಭಕಂಠದ ಕ್ಯಾನ್ಸರ್‌ನಿಂದ ಬಂದವುಗಳಾಗಿವೆ




**ಗರ್ಭಕಂಠದ ಕ್ಯಾನ್ಸರ್‌ನ ಆರಂಭಿಕ ಹಂತಗಳಲ್ಲಿ ಮಹಿಳೆಗೆ ಯಾವುದೇ ರೋಗ ಲಕ್ಷಣಗಳಿರುವುದಿಲ್ಲ ಹಾಗಾಗಿ ಲಕ್ಷಣಗಳಿಲ್ಲದ ಮಹಿಳೆಯರೂ ತಪಾಸಣೆಗೆ ಒಳಗಾಗುವುದು ಬಹುಮುಖ್ಯ**

**ತಪಾಸಣಾ ಪರೀಕ್ಷೆಯನ್ನು ಹೊಂದಬೇಕಾದವರು:**

ನೀವು 30--55 ವರ್ಷ ವಯಸ್ಸಿನವರಾಗಿದ್ದರೆ ತಪಾಸಣೆಗೆ ಬನ್ನಿ.

**ಈ ಸಂದರ್ಭಗಳಲ್ಲಿ ತಪಾಸಣೆಯನ್ನು ಮಾಡಿಸಬೇಡಿ:**

» ನಿಮಗೆ ಮುಟ್ಟಿನ ಸಮಯವಾಗಿದ್ದರೆ
» ಗರ್ಭಿಣಿ ಅಥವಾ ಹೆರಿಗೆಯಾಗಿದ್ದರೆ
» ನೀವು ಗರ್ಭಕೋಶ ತೆಗೆಯುವ ಶಸ್ತ್ರಚಿಕಿತ್ಸೆಯನ್ನು ಮಾಡಿಸಿದ್ದರೆ
» ನೀವು ಈಗಾಗಲೇ ಗರ್ಭಕಂಠದ ಕ್ಯಾನ್ಸರ್ ಹೊಂದಿದ್ದು ಚಿಕಿತ್ಸೆ ಪಡೆದಿದ್ದರೆ

ನಿಮಗೆ ಯಾವುದೇ ಪ್ರಶ್ನೆಗಳಿದ್ದಲ್ಲಿ ಅಥವಾ ಸಂಭೋಗದ ನಂತರ ರಕ್ತಸ್ರಾವ ಅಥವಾ ಮುಟ್ಟಿನ ಅವಧಿಯ ನಡುವೆ ಅಥವಾ ಋತುಬಂಧದ ನಂತರ ರಕ್ತಸ್ರಾವವಿದ್ದರೆ / ವಾಸನೆಯುಕ್ತ ಬಿಳಿಸ್ರಾವದಂತಹ ಲಕ್ಷಣಗಳನ್ನು ಗಮನಿಸಿದರೆ ಕೊಟ್ಟ ಮೊಬೈಲ್ ನಂಬರ್ ಮೂಲಕ ನಮ್ಮನ್ನು ಸಂಪರ್ಕಿಸಿ

## PRESCRIP-TEC ನಲ್ಲಿ ಹೊಸ ಬದಲಾವಣೆ



**ಹೆಚ್.ಪಿ.ವಿ ಸ್ವಯಂ ಪರೀಕ್ಷೆ:**
ಮಹಿಳೆ ತಾನೇ ಸ್ವತಃ ಮಾದರಿಯನ್ನು ಸಂಗ್ರಹಿಸಬಹುದು



**ಕೃತಕ ಬುದ್ಧಿಮತ್ತೆ(AI/ಎಐ)**
ವಿಐಎ ಸಮಯದಲ್ಲಿ ನಿರ್ಧಾರ ಮಾಡಲು ಎಐ ಸಹಾಯ ಸಾಧನವಾಗಿ ಕಾರ್ಯನಿರ್ವಹಿಸುತ್ತದೆ



**ಸ್ಥಳದಲ್ಲೇ ತಕ್ಷಣ ಚಿಕಿತ್ಸೆ**
ಸರಳ, ಸುರಕ್ಷಿತ ಮತ್ತು ಸ್ಥಳದಲ್ಲೇ ತಕ್ಷಣ ಚಿಕಿತ್ಸೆ

Prescriptec.org


**ಹೆಚ್ಚಿನ ಮಾಹಿತಿಗಾಗಿ ಇಲ್ಲಿ ಸಂಪರ್ಕಿಸಿರಿ**

**ಡಾ. ನಾಗರತ್ನ ಶಾಸ್ತ್ರಿ**
ಜಿಲ್ಲಾ ಸರ್ವೇಕ್ಷಣಾಧಿಕಾರಿ, ಜಿಲ್ಲಾ ಸರ್ವೇಕ್ಷಣಾ ಘಟಕ, ಉಡುಪಿ ಜಿಲ್ಲೆ
:9482847966

**ಡಾ ಬಿಂಧ್ಯಾ ವಿಜಯನ್**
ಸಂಶೋಧನಾ ಸಹವರ್ತಿ, ಮಾಹೆ, ಮಣಿಪಾಲ, ಉಡುಪಿ ಜಿಲ್ಲೆ
:9747176300

**ಶ್ರೀಮತಿ ಜೊಸ್ಲಿನ್ ಡಿ'ಅಲ್ಮೇಡಾ**
ಸಂಶೋಧನಾ ಸಹವರ್ತಿ, ಮಾಹೆ, ಮಣಿಪಾಲ, ಉಡುಪಿ ಜಿಲ್ಲೆ
:9448869997


## ಪ್ರಯೋಜನಗಳು

» ತಾನೇ ಸ್ವತಃ ಕ್ಯಾನ್ಸರ್ ಪರಿಶೀಲನೆ ಮಾಡುವುದು
» ಉಚಿತ ಕ್ಯಾನ್ಸರ್ ಪರಿಶೀಲನೆ
» ಫಲಿತಾಂಶದಲ್ಲಿ ಹೆಚ್ಚಿನ ನಿಖರತೆ
» ಸಮುದಾಯ ಆರೋಗ್ಯ ವೃತ್ತಿಪರರ ಸಬಲೀಕರಣ
» ಕಡಿಮೆ ಪ್ರಮಾಣದ ಸ್ತ್ರೀರೋಗ ಸಂಬಂಧಿತ ಯೋನಿಯ ಪರೀಕ್ಷೆ
» ವಿ.ಐ.ಎ ರೋಗ ನಿರ್ಧಾರದ ಸಮಯದಲ್ಲಿ ಎ.ಐ ಯು ಸಹಾಯಕವಾಗುತ್ತದೆ

**"ಸಖಿ ಮಣಿಪಾಲ"** ಎಂಬುವುದು ಗರ್ಭಕಂಠದ ಕ್ಯಾನ್ಸರ್ ಅನ್ನು ಪತ್ತೆಹಚ್ಚಲು ಕೃತಕ ಬುದ್ಧಿಮತ್ತೆಯನ್ನು (ಎ.ಐ) ಬಳಸಿಕೊಂಡು ನಿರ್ಮಿಸಲಾದ ಒಂದು ಸಾಧನವಾಗಿದೆ.

**ಗರ್ಭಕಂಠದ ಕ್ಯಾನ್ಸರ್ ತಪಾಸಣೆಯ ಕುರಿತು ಸ್ಪಷ್ಟತೆ:**

1. ಹಾಯ್, ಇವತ್ತು ಗರ್ಭಕಂಠದ ಕ್ಯಾನ್ಸರ್ ತಪಾಸಣಾ ಶಿಬಿರ ಇದೆ, ನಾವು 30 ರಿಂದ 55 ವರ್ಷ ವಯಸ್ಸಿನವರ ಗುಂಪಿಗೆ ಸೇರಿದ್ದೇವೆ ಹಾಗಾಗಿ ಶಿಬಿರಕ್ಕೆ ಹೋಗಿ ತಪಾಸಣೆಯನ್ನು ಮಾಡಿಸಿಕೊಳ್ಳೋಣ.

2. ಇಲ್ಲ, ನಾನು ಬರುವುದಿಲ್ಲ. ನನ್ನ ಪರೀಕ್ಷೆಯ ಫಲಿತಾಂಶ ಪಾಸಿಟಿವ್ ಬಂದರೆ?

1. ಇಲ್ಲ, ಹೆಚ್ ಪಿ ವಿ ಪರೀಕ್ಷೆಯು ಗರ್ಭಕಂಠದಲ್ಲಿ ಹ್ಯೂಮನ್ ಪ್ಯಾಪಿಲೋಮ ವೈರಸ್ (ಹೆಚ್ ಪಿ ವಿ) ಇರುವಿಕೆಯನ್ನು ಮಾತ್ರ ಪತ್ತೆ ಮಾಡುತ್ತದೆ, ಹೆಚ್ ಪಿ ವಿ ಪಾಸಿಟಿವ್ ಬಂದರೆ, ಕ್ಯಾನ್ಸರ್ ಇದೆ ಎಂದಲ್ಲ, ಇದರರ್ಥ ವೈದ್ಯರು ನಿಮ್ಮ ಗರ್ಭಕಂಠದ ಪರೀಕ್ಷೆ ಮಾಡಿ, ಗರ್ಭಕಂಠದ ಚರ್ಮದ ಮೇಲೆ ಯಾವುದೇ ಬದಲಾವಣೆಗಳಿವೆಯೇ ಎಂದು ನೋಡುವುದು.

2. ಓಕೆ, ಹಾಗಾದರೆ ನಾವು ಶಿಬಿರಕ್ಕೆ ಹೋಗಿ ಪರೀಕ್ಷೆ ಮಾಡಿಸೋಣ.